KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by SHUBHA GOWDAR)**
**SC/2/2021**

Complainant:
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

---

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

---

**Offence punishable under : SEC.314. of INDIAN PENAL CODE,**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**S.C. No: 02/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀನಿವಾಸ | ಪ್ರಾ.ಸಾ.- 05 |
| ತಂದೆಯ ಹೆಸರು | ಃ | ಗಂಗಯ್ಯ | ಚಾ.ಸಾ.- 09 |
| ವಯಸ್ಸು | ಃ | 45 ವರ್ಷ | |
| ಉದ್ಯೋಗ | ಃ | ಕೂಲಿ ಕೆಲಸ | |
| ವಾಸ ಸ್ಥಳ | ಃ | ಮಠದ ಗದ್ದೆ | |

**ದಿನಾಂಕಃ 10-10-2022**

**ಪ್ರಮಾಣ ವಚನ ಬೋಧಿಸಲಾಯಿತು.**

**<u>: ಮುಖ್ಯ ವಿಚಾರಣೆ: ಮಾನ್ಯ ಪಿ.ಪಿ. ಯವರಿಂದ:</u>**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ಶ್ರೀರಾಜ್ ನನಗೆ ಗೊತ್ತು. ಪ್ರಾಸಾ-1 ಸುರೇಶ, ನಾಗರತ್ನ ನನಗೆ ಗೊತ್ತು. ಚಾಸಾ-11 ಶಾಂತ ನನಗೆ ಗೊತ್ತಿಲ್ಲ.

2. 2 ವರ್ಷಗಳ ಹಿಂದೆ ಸಾಯಂಕಾಲ 5.30/6.00 ಗಂಟೆಗೆ ಶಾಂತಾ ಅವರ ಮನೆ ಹತ್ತಿರ ಪೊಲೀಸರು ಸಹಿ ಬೇಕೆಂದು ನನ್ನ ಸಹಿ ಮಾಡಿ ಎಂದು ಪಡೆದರು, ಕಾರಣ ಗೊತ್ತಿಲ್ಲ, ಮಹಜರ್ ಬಗ್ಗೆ ನನಗೆ ಗೊತ್ತಿಲ್ಲ.

3. ಈಗ ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತಮ್ಮ ಸಹಿ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ, ಆ ಸಹಿಯನ್ನು ಗುರುತಿಸುವ ಸಲುವಾಗಿ ದಾಖಲೆಯನ್ನು (ಪೊಲೀಸ್ ನೋಟೀಸ್ ಇರುತ್ತದೆ) ನಿ.ಪಿ. 7 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು.

4. ಈಗ ಸಾಕ್ಷಿದಾರರಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತಮ್ಮ ಸಹಿ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ, ಆ ಸಹಿಯನ್ನು ಗುರುತಿಸುವ ಸಲುವಾಗಿ ದಾಖಲೆಯನ್ನು (ಸ್ಥಳ ಮಹಜರ್ ಇರುತ್ತದೆ) ನಿ.ಪಿ. 8 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ. 8(ಎ) ಎಂದು ಗುರುತಿಸಲಾಯಿತು. ನಿ.ಪಿ. 7 ಮತ್ತು 8 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

5. ಈಗ ಸಾಕ್ಷಿದಾರರಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ನಾನು ಇದ್ದೇನೆ ಎಂದು ಹೇಳಿರುತ್ತಾರೆ, ಆ ಫೋಟೋವನ್ನು ನಿ.ಪಿ. 9 ಎಂದು ಗುರುತಿಸಲಾಯಿತು. ಫೋಟೋ ಏಕೆ ತೆಗೆದರು ಎಂದು ನನಗೆ ಗೊತ್ತಿಲ್ಲ. ಘಟನೆ ಬಗ್ಗೆ ನನಗೇನು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಪಿ.ಪಿ.ಯವರಿಂದಃ</u>**

6. ದಿನಾಂಕಃ 20-02-2019 ರಂದು ಸಾಯಂಕಾಲ 5.00 ಗಂಟೆಗೆ ಚಾಸಾ-11 ಶಾಂತಾ ಇವರ ಮನೆಯಲ್ಲಿ ಪೊಲೀಸರು ನನ್ನ ಮತ್ತು ಚಾಸಾ-10 ಶಿವಮೂರ್ತಿ ಇವರ ಸಮಕ್ಷಮ ಸ್ಥಳ ಮಹಜರನ್ನು ನಿ.ಪಿ.8 ರ ಪ್ರಕಾರ ಮಾಡಿ, ಅದರಲ್ಲಿ ಬರೆದುದನ್ನು ಓದಿ ಹೇಳಿ, ನನ್ನ ಸಹಿ ಪಡೆದರು ಎನ್ನುವುದು ಸರಿಯಲ್ಲ. ಅದಕ್ಕಿಂತ ಮೊದಲು ನಿ.ಪಿ.7 ರ ಪೊಲೀಸ್ ನೋಟೀಸನ್ನು ನಮಗೆ ಕೊಟ್ಟಿದ್ದರು ಎನ್ನುವುದು ಸರಿಯಲ್ಲ.

7. ಆರೋಪಿಯು ನಾಗರತ್ನಳೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿದ್ದೆಂದು, ನಾಗರತ್ನ ಗರ್ಭಿಣಿ ಆಗಿದ್ದರಿಂದ ಅಬಾರ್ಷನ್ ಆಗಲೆಂದು ಆರೋಪಿ ಮಾತ್ರೆ ಕೊಟ್ಟಿದ್ದನೆಂದು, ಆ ಮಾತ್ರೆಗಳನ್ನು ಇದೇ ಮನೆಯ ಒಳಗೆ ನಾಗರತ್ನಳು ನುಂಗಿದ್ದು, ರಕ್ತಸ್ರಾವ ಆಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಳು ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರೆಗಳನ್ನು ನುಂಗಿದ ಸ್ಥಳ ಎಂದು ಮೇಲೆ ಹೇಳಿದ ಮಹಜರನ್ನು ಮಾಡಿದರು ಎನ್ನುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಮತ್ತು ಘಟನೆ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಐ.ಎಸ್.ಟಿ. ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ, ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-10-10-2022**
**(ಶುಭ ಗೌಡರ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app "**eCourts Services**" from Android or iOS